> ನನ್ನ ಪುಸ್ತಕ ಪ್ರಕಟವಾಗದಿದ್ದರೆ ಅದ್ಭುತವಾದ ಸಂಗೀತ ಸೃಷ್ಟಿಸುತ್ತಿದ್ದೆ ಇಲ್ಲವೆ ಉತ್ತಮ ಗೆಳತಿಯಾಗಿರುತ್ತಿದ್ದೆ. ಹೌದು ಏನಾದರೂ ಅದ್ಭುತವಾದದ್ದನ್ನೇ ಮಾಡುತ್ತಿದ್ದೆ. ನನ್ನ ನೆರೆಹೊರೆಯವರಿಗೆ, ನನ್ನ ಸ್ನೇಹಿತರಿಗೆ, ನನ್ನ ಪ್ರೇಮಿಗೆ ಯಾರಿಗಾದರೂ ನನ್ನಿಂದ ಸಾಧ್ಯವಾಗುವ ಅದ್ಭುತವಾದದ್ದನ್ನೇ ನೀಡುತ್ತಿದ್ದೆ. ಜಗತ್ತು ನಾನು ಯಶಸ್ವಿಯಾದೆ ಎಂದು ಹೇಳುವುದರ ಬಗ್ಗೆ ನಾನೆಂದೂ ತಲೆಕೆಡಿಸಿಕೊಂಡಿಲ್ಲ. ನನಗದರ ಅವಶ್ಯಕತೆಯೂ ಇಲ್ಲ.

ವಜ್ರವಾಗಲು ಹೆಚ್ಚು ಸಮಯ, ಒತ್ತಡ ಎರಡನ್ನೂ ತಡೆದುಕೊಳ್ಳಬೇಕು. ಅದಕ್ಕಿಂತ ಕಡಿಮೆ ಸಮಯವಾದರೆ ಸ್ಫಟಿಕವಾಗುವಿರಿ. ಅದಕ್ಕಿಂತಲೂ ಕಡಿಮೆ ಸಮಯವಾದರೆ ಇದ್ದಿಲು. ಅದಕ್ಕಿಂತ ಕಡಿಮೆ ಸಮಯವಾದರೆ ಕೊಳೆತ ಎಲೆ. ಅದಕ್ಕಿಂತಲೂ ಕಡಿಮೆ ಸಮಯವಾದರೆ ಬರಿ ಕಸ. ನನ್ನೆಲ್ಲ ಕೃತಿಗಳಲ್ಲಿ, ನಾನು ಬರೆದ ಸಿನಿಮಾಗಳಲ್ಲಿ, ಹಾಡುಗಳಲ್ಲಿ, ಪದ್ಯದಲ್ಲಿ, ಗದ್ಯದಲ್ಲಿ, ಪ್ರಬಂಧಗಳಲ್ಲಿ ಹೇಳುತ್ತಲೇ ಇದ್ದೇನೆ, ನಾವು ಹಲವು ಸೋಲುಗಳನ್ನು ಎದುರಿಸಬೇಕಾಗಬಹುದು. ಬಹುಶಃ ಅದು ಅನಿವಾರ್ಯವಿರಬಹುದು. ನಾವು ಅಂದುಕೊಂಡಿರುವುದಕ್ಕಿಂತ ಕಾಣುವುದಕ್ಕಿಂತ ಹೆಚ್ಚಿನ ಶಕ್ತಿ ನಮ್ಮಲ್ಲಿದೆ. ಮನುಷ್ಯರೆಲ್ಲರೂ ಒಂದೇ ರೀತಿ. ಅವರಲ್ಲಿ ಭಿನ್ನತೆಯಿಲ್ಲ. ಇದೇನು ಗಹನ ರಹಸ್ಯವಲ್ಲ. ಪ್ರತಿ ಮನುಷ್ಯ ಯಹೂದಿ, ಕ್ರಿಶ್ಚಿಯನ್, ಮುಸ್ಲಿಂ, ಶಿಂಟೋಯಿಸ್ಟ್, ಝೆನ್, ಬೌದ್ಧ, ನಾಸ್ತಿಕರು ಯಾರೇ ಆಗಲಿ, ಪ್ರತಿಯೊಬ್ಬರಿಗೂ ಬದುಕಲು ಒಳ್ಳೆಯ ಜಾಗ ಬೇಕು. ಶಾಲೆಗೆ ಹೋಗಲು ಮಕ್ಕಳಿಗೆ ಒಳ್ಳೆಯ ಜಾಗ ಬೇಕು. ಆರೋಗ್ಯವಂತ ಮಕ್ಕಳು ಬೇಕು, ಪ್ರೀತಿಸಲು ಯಾರಾದರೂ ಬೇಕು, ಧೈರ್ಯ ಬೇಕು, ಪ್ರೀತಿಯನ್ನು ಒಪ್ಪಿಕೊಳ್ಳಲು ಧೈರ್ಯಬೇಕು, ಶನಿವಾರ ಇಲ್ಲವೆ ಭಾನುವಾರ ರಾತ್ರಿ ಪಾರ್ಟಿ ಮಾಡಲೊಂದು ಜಾಗ ಬೇಕು, ದೇವರಿಗೊಂದು ಜಾಗ ಬೇಕು. ಇದೇನು ರಹಸ್ಯವಾದ ಸಂಗತಿಯಲ್ಲ. ನನ್ನ ಕೃತಿಗಳಲ್ಲಿ ಹೇಳಿರುವುದು ಇದೇ ಸಂಗತಿ.

◆ **ಆತ್ಮಚರಿತ್ರೆಯನ್ನು ಬರೆಯುವ ಮೂಲಕ, ನಿಮ್ಮನ್ನು ತಿಳಿದುಕೊಳ್ಳುವ ಮೂಲಕ ಗತಕಾಲಕ್ಕೆ ಸರಿಯುವುದು ಸುಲಭ ಅನ್ನಿಸುತ್ತದೆ.**

ಬರವಣಿಗೆ 'ಹಳೆಯದನ್ನು ಒರೆಸಿಹಾಕುತ್ತದೆ' ಎಂದು ಹಲವರ ಅನಿಸಿಕೆ. ನೀವು ಆತ್ಮಚರಿತ್ರೆ ಬರೆದ ಮಾತ್ರಕ್ಕೆ ಅದು ಎಲ್ಲವನ್ನೂ ಸ್ವಚ್ಛಗೊಳಿಸುತ್ತದೆ ಎಂದುಕೊಳ್ಳಬೇಡಿ. ಅದು ಎಲ್ಲವನ್ನೂ ಇನ್ನಷ್ಟು ಸ್ಪಷ್ಟಗೊಳಿಸುತ್ತದೆಯೇ ಹೊರತು ಏನನ್ನೂ ತೆಗೆದುಹಾಕುವುದಿಲ್ಲ. ಇದು ನಿಮಗೆ ಗೊತ್ತಿದ್ದರೆ ಒಳ್ಳೆಯದು.

◆ **ಮನೆಯಲ್ಲಿ ಪುಸ್ತಕಗಳನ್ನು ಓದಲು ಅವಕಾಶವಿತ್ತೆ?**

ಮನೆಯಲ್ಲಿ ಪುಸ್ತಕಗಳಿರಲಿಲ್ಲ. ಶಾಲೆಯಿಂದ ಮನೆಗೆ ಪುಸ್ತಕಗಳನ್ನು ಮನೆಗೆ ತರುತ್ತಿದ್ದೆವು. ನನ್ನಣ್ಣ ಎಡ್ಗರ್ ಆಲನ್ ಪೋನ ಪುಸ್ತಕ ತಂದುಕೊಟ್ಟಿದ್ದ. ನನಗೆ ಆ ಲೇಖಕ ಇಷ್ಟ ಅಂತ ಅವನಿಗೆ ಗೊತ್ತಿತ್ತು. ಅವನನ್ನು EAP ಅಂತ ಕರೆಯುತ್ತಿದ್ದೆ. ಏಳೂವರೆ ವರ್ಷದವಳಿದ್ದಾಗ ಉಂಟಾದ ಸಮಸ್ಯೆಯಿಂದ ಹನ್ನೆರಡೂವರೆ ವರ್ಷದವರೆಗೆ ನಾನು ಮಾತಾಡದೆ ಮೂಕಿಯಂತಿದ್ದೆ. ಮಾತಾಡಲು ಬರುತ್ತಿದ್ದರೂ ಐದು ವರ್ಷ ಮೂಕಿಯಂತಿದ್ದೆ. ಎಲ್ಲರೂ 'ಮೂಗಿ' ಅಂತಲೇ ಕರೆಯುತ್ತಿದ್ದರು. ಆದರೆ,